

ನಿಂತಿದ್ದನು. ಸರ್, 'ಲೇ ಮಗನ... ಹಿಂದ್ ಕುಂತು ನಿದ್ದಿ ಮಾಡ್ತಿಯೇನು?' ಎಂದು ಅವನ ಕಪಾಳಕ್ಕೆ ಛಪ್ಪಂತ ಒಂದು ಏಟು ಕೊಟ್ಟರು. ಏಟು ಬಿದ್ದ ರಭಸಕ್ಕೆ ಬೆಚ್ಚಿದ ಒಂದಿಬ್ಬರು ಹುಡುಗಿಯರಿಂದ ಸಣ್ಣದಾಗಿ ಹೊರಬಿದ್ದ ಮರುಕದ ಧ್ವನಿಯೊಂದಿಗೆ ಕ್ಲಾಸಿನ ಎಲ್ಲ ಸೌಂಡು ಸಂಪೂರ್ಣ ತಣ್ಣಗಾಯಿತು. 'ನೋಡು ಮಗನ, ನಿನ್ನ ಹೆಸರಿನ್ಯಾಗಿನ 'ಅ' ತೆಗದುಬಿಡ್ತೀನಿ. ಮುಂದ ಉಳಿಯೋದು ಏನು ಗೊತ್ತನು? ಬರೇ 'ಶೋಕ..!' ಗೊತ್ತಾತನು..? ಎಚ್ಚರಲೆ ಇರು ಇನ್ನ ಮ್ಯಾಲೆ' ಎಂದು ಕ್ಲಾಸಿನಿಂದ ನಿರ್ಗಮಿಸಿದರು. ಅಶೋಕನಿಗೆ ಆ ಹೊತ್ತು ಪೂರ್ತಿ 'ಶೋಕ'ವೇ ಆವರಿಸಿತ್ತು. ಆದರೆ ಸರ್ ಹೇಳಿದ 'ಶೋಕ' ಅಂದರೆ ಇದೇ ಎಂದು ಅವನಿಗೇನು ಅರ್ಥವಾಗಿದ್ದಿಲ್ಲ!

ನಮ್ಮದು ಮಠದ ಶಾಲೆಯಾಗಿತ್ತು. ಬೇರೆ ಊರುಗಳಿಂದ ಕಲಿಯಲು ಬರುವ ಮಕ್ಕಳಿಗೆ ಮಠದಲ್ಲಿ ಬೋರ್ಡಿಂಗ್ ವ್ಯವಸ್ಥೆ ಇತ್ತು. ಅದಕ್ಕಾಗಿ ಅವರು ಊರಿನಲ್ಲಿ ಕಜ್ಜಾ (ಮನೆ ಮನೆಗಳಲ್ಲಿ ರೊಟ್ಟಿ) ಎತ್ತಿ, ಅದನ್ನೇ ಪ್ರಸಾದ ಯಾ ಊಟ ಮಾಡುತ್ತಿದ್ದರು. ಅಶೋಕ ಪಕ್ಕದ ಹಳ್ಳಿಯಿಂದ ಬಂದವನಾಗಿದ್ದರಿಂದ ಅವನು ಮಠದಲ್ಲಿ ಇರುತ್ತಿದ್ದ. ಕ್ಲಾಸಿನಾಗ ಅವನು ಆಗಾಗ ನಿದ್ದೆ ಮಾಡುತ್ತಿದ್ದುದು ಖರೇವಿತ್ತು. 'ಯಾಕಲೇ ನಿದ್ದಿ ಮಾಡ್ತಿದಿ...' ಅಂತ ನಾವ್ ಕೇಳಿದರ, 'ಮಠದಾಗ ನಸ್ಸಿನ್ಯಾಗ ಎಬ್ಬಿಸಿ ಘಂಟಿ (ಜಾಗಟೆ) ಬಡಿಯಾಕ ಹಚ್ಚತಾರಲೇ ಯಪ್ಪಾ ಏನ್ಮಾಡೂದು... ಅದಕ್ಕ ಒಮ್ಮೊಮ್ಮೆ ನಿದ್ದಿ ಬರುತ್ತ' ಅಂತಿದ್ದ.

ಆಟದ ಮಾಸ್ತರು, ಅವರು ಭಯಂಕರ ಶಿಸ್ತಿನ ಮನುಷ್ಯ. ಪ್ರೇಯರ್‌ಗೆ ಲೇಟಾಗಿ ಬರೂವಂಗಿಲ್ಲ, ಯೂನಿಫಾರಂ ಇಲ್ಲದೇ ಬರೂವಂಗಿಲ್ಲ. ಶಾಲೆ ರಜವಿದ್ದಾಗ ಬಸ್‌ಸ್ಟ್ಯಾಂಡ್ ಸುತ್ತಮುತ್ತ, ಹೊರಗ ವಿದ್ಯಾರ್ಥಿಗಳು ಎಲ್ಲಂದರಲ್ಲಿ ಕಾಣಿಸುವ ಹಾಗಿಲ್ಲ... ಹೀಗೆ ಭಾಳ ಕಟ್ಟುನಿಟ್ಟು. ಇವುಗಳಲ್ಲಿ ಯಾವುದಾದರೂ ಒಂದು ಲೋಪ ಕಂಡು ಬಂದರೆ ಅಂಥವನಿಗೆ ತಕ್ಕ ಶಾಸ್ತಿ, ಲಗ್ನ, ಪೂಜೆ...! ಇತ್ಯಾದಿಯೊಳಗೆ ಒಂದು ಗ್ಯಾರಂಟಿ ಅಂತಲೇ ಅರ್ಥ. ನನಗೂ ಹೀಗೊಮ್ಮೆ ಚಲೋ ಪೂಜೆ ಆಗಿತ್ತು. ಅದು ಒಂದಿನ ಶಾಲೆ ಬಿಟ್ಟಿದ್ದಕ್ಕೆ.

ಆವತ್ತು ಯಾರೋ ಸಾಹೇಬರು ಬಂದಿದ್ದರಂತೆ. ಅವರ ಎದುರು ಸರ್ ನಮ್ಮಿಂದ ಶಿಸ್ತಾಗಿ ಒ. ಆ. (ಸಾಮೂಹಿಕ ಕವಾಯಿತು) ಮಾಡಿಸಿ ತಮ್ಮ ಸಾಮರ್ಥ್ಯ ತೋರಿಸಿಕೊಳ್ಳಬೇಕಿತ್ತೇನೊ! ಆದರೆ, ಆವತ್ತು ಶಾಲೆ ಬಿಟ್ಟವರು ಬಹಳ ವಿದ್ಯಾರ್ಥಿಗಳಿದ್ದರು. ಅದರಲ್ಲಿ ನಾನೂ ಒಬ್ಬ! ತುಗೋ ಮರುದಿವಸ ಶಾಲೆಗೆ ಬಂದೊಡನೆ ನನ್ನ ಸಹಪಾಠಿಗಳು ಭಾಳ ಖುಷಿಯಿಂದ ಬಜಾಯಿಸತೊಡಗಿದರು 'ಹಾಂಅ.. ನಿನ್ನೆ ಸಾಲಿ ಬಿಟ್ಟವರಿಗೆ ಐತಿ ಇವತ್ತ..' ಎಂದು. ಆದದ್ದಾಗಲಿ ಎಂದು ಮನಸ್ಸು ಗಟ್ಟಿ ಮಾಡಿಕೊಂಡು ಪೂಜೆಗೆ ಸಿದ್ಧನಾದೆ. ನಿನ್ನೆ ದಿನ ಶಾಲೆಗೆ ಬರಲಾರದವರನ್ನು ಪ್ರೇಯರ್ ಮುಗಿದೊಡನೆ ಸೆಪರೇಟ್ ಲೈನ್ ಮಾಡಿಸತೊಡಗಿದರು. ನಾನು ಆದಷ್ಟು ಹಿಂದೆ ಹಿಂದೆ ನಿಲ್ಲಲು ನೋಡಿದೆ. ಯಾಕೆಂದರೆ, ಮೊದಮೊದಲು ಪೂಜೆಯಾರಂಭ ಕಾಲದಲ್ಲಿ ಸರ್ ಆರ್ಭಟ ಜೋರಾಗಿರುತ್ತದೆಯಾದ್ದರಿಂದ, ಪೂಜೆ ಉಗ್ರ ಸ್ವರೂಪದಲ್ಲಿ ನಡೆಯುತ್ತದೆ. ಬರಬರುತ್ತ ಆರ್ಭಟ ಕಡಿಮೆಯಾಗಿ ಶಾಂತಯುತ ಪೂಜೆ ಕೊನೆಯಲ್ಲಿದ್ದವರಿಗೆ ಆಗಬಹುದೆಂದು ನನ್ನ ಲೆಕ್ಕಾಚಾರವಾಗಿತ್ತು. ಇದು ನನ್ನ ಲೆಕ್ಕಾಚಾರವಷ್ಟೇ ಆಗಿರಲಿಲ್ಲ. ತಪ್ಪಿತಸ್ಥರಂತೆ ನಿಂತಿದ್ದ ಉಳಿದವರೆಲ್ಲರ ಮನಸ್ಸಿನಲ್ಲಿ ಇದೇ ಲೆಕ್ಕಾಚಾರ ಶುರುವಾಗಿ ಯಾವೊಬ್ಬನೂ ಲೈನ್ ಮಾಡಲು ಮುಂದೆ ಬರಲಿಲ್ಲ. ಎಲ್ಲರೂ ಗುಂಪುಗೂಡಿ ಮುಂದಾಗುವ ಪೂಜೆಗೆ ಮಂತ್ರ ಜಪಿಸುವಂತೆ 'ಹಹಹಾ... ಹುಹುಹೂ..' ಅನ್ನುತ್ತಿದ್ದೆವು. ಸರ್, 'ಲೇ... ಎತ್ತರ ಪ್ರಕಾರ ಲೈನ್ ಮಾಡ್ರಿ' ಎಂದರು. ಅಬ್ಬಾ..! ಅಂತೂ ನನ್ನ ಹೈಟ್ ಈಗ ಬಲು ಉಪಯೋಗಕ್ಕೆ ಬಂತೆಂದು ಖುಷಿಗೊಂಡೆ. ನನ್ನದು ಒಳ್ಳೆಯ ಹೈಟ್ ಇದ್ದುದರಿಂದ ಹೆಚ್ಚು ಕಮ್ಮಿ ಲೈನ್‌ನಲ್ಲಿ ಕೊನೆಗೆ ಬರ್ತೀನಿ ಅಂತ ಸಮಾಧಾನವಾಯ್ತು. ಆದರೆ ಈ ಸಮಾಧಾನ ಸರ್ ನೀಡಿದ ಮತ್ತೊಂದು ಆರ್ಡರ್‌ನಿಂದ ಎಲ್ಲಾ ಉಲ್ಟಾಪಲ್ಟಾ ಆಗಿಬಿಡ್ತು. 'ಎತ್ತರಿದ್ದವರು ಮೊದಲ ನಿಲ್ಲರಿ, ಗಿಡ್ಡ ಇದ್ದವರು ಹಿಂದ ನಿಲ್ಲರಿ' ಅಂದುಬಿಟ್ಟರು! ನನ್ನ ಹೈಟ್‌ಗೆ ನಾನೇ ಬೈದುಕೊಳ್ಳುತ್ತ ಲೈನಲ್ಲಿ ಸೇರಿಕೊಳ್ಳತೊಡಗಿದೆ. ಎಲ್ಲಪ್ಪನೆಂಬೋನು ಎಲ್ಲರಿಗಿಂತ ಎತ್ತರವಾಗಿದ್ದರಿಂದ ಅವನೇ ಮೊದಲ ದುರದೃಷ್ಟವಂತನಾದನು. ನಾನು ಮೂರನೇ ನಂಬರ್‌ನಲ್ಲಿ ನಿಂತೆ. ಹಸಿಯಾದ ಜಬರಿಯೊಂದನ್ನು ಕೈಯಲ್ಲಿ ತುಗೊಂಡಿದ್ದ ಸರ್, ಬೀಸಿ ಬೀಸಿ ಬಾರಿಸತೊಡಗಿದರು, ಏಟು ರಪ್ಪ ರಪ್ಪಂತ ಬೀಳುತ್ತಿದ್ದವು! ಇಬ್ಬರಿಗೆ ಬಾರಿಸುವುದರೊಳಗೆ ಆ ಬಡಿಗೆ ತುಂಡುತುಂಡಾಗಿ ಹೋಯ್ತು. ಈಗ ನನ್ನ ಪಾಳಿ ಬಂತು! ಹೊಸ ಬಡಿಗೆ ತರಲು ಸರ್, ಅವರ ಖಾಸಾ ಶಿಷ್ಯನೊಬ್ಬನನ್ನು ಓ.ಅ.ಅ. ರೂಮಿಗೆ ಅಟ್ಟಿದರು. ಅವನೋ ಹುಡುಕಾಡಿ ಜಬರ್ದಸ್ತಾಗಿದ್ದ ಕೇನ್ ತಂದುಬಿಟ್ಟನು! ಆ ಕೇನ್ ಅನ್ನು ಸರ್ ಆಗಾಗ ಬಗಲಲ್ಲಿಟ್ಟುಕೊಂಡು ಬರುವುದನ್ನು ಗಮನಿಸಿದ್ದೆ. ಅದು ಪೊಲೀಸ್ ಇನ್‌ಸ್ಪೆಕ್ಟರ್‌ಗಳ ಹತ್ತಿರ ಇರುತ್ತಲ್ಲ... ಹಾಗೇ ಕೆಂಪಗೆ ಇದ್ದು, ಎರಡೂ ತುದಿಗಳಲ್ಲಿ ಸ್ಟೀಲಿನ ಹಿಡಿ ಇತ್ತು. ಆ ಸ್ಟೀಲಿನ ಹಿಡಿ ಒಂದು ಕಡೆ ಗೋಲಾಕಾರದಲ್ಲಿದ್ದುದರಿಂದ ಹಿಡಿದುಕೊಂಡು ಚಚ್ಚಲು ಒಳ್ಳೇ ದಿವಿನಾಗಿತ್ತು.

ಹೊಡೆತ ತಪ್ಪಿಸಿಕೊಳ್ಳಲು ಏನಾದರೊಂದು ಬಲವಾದ ಕಾರಣವನ್ನು ಕೊಡಬೇಕೆಂದು ಹಿಂದಿನ ದಿನದಿಂದಲೇ ಯೋಚಿಸಿ ಮನದಟ್ಟು ಮಾಡಿಕೊಂಡಿದ್ದೆ. ಸರ್ ನನ್ನ ಬಳಿ ಬಂದು ಕೈ ಎತ್ತುತ್ತಿದ್ದಂತೆ 'ಸ್ಸಸ... ಸರ್ ನಮ್ಮಜ್ಜಿ ತೀರಿಕೊಂಡಿದ್ದಳ್ರೀ...' ಅಂತ ಎಂದೋ ಸತ್ತುಹೋಗಿದ್ದ ಅಜ್ಜಿಯನ್ನು ಇನ್ನೊಮ್ಮೆ ಸಾಯಿಸಿದೆ. ವಿದ್ಯಾರ್ಥಿಗಳು ನೀಡುವ ಯಾವ ಕಾರಣವನ್ನು ಕಿವಿಗೂ ಹಾಕಿಕೊಳ್ಳದೆ ಒಟ್ಟೂ ನಿನ್ನೆ ಬರದಿದ್ದವರನ್ನು ಬೇಸ್ಯಾಗಿ ಬಾರಿಸಬೇಕೆಂಬುದೇ ಅವರ ಅಂತಿಮ ಗುರಿಯಾಗಿದ್ದರಿಂದ 'ಅಜ್ಜಿ ಸತ್ತಿದ್ಲಾ... ಏನು ಮುತ್ಯಾ ಸತ್ತಿದ್ನಾ... ಆಂ..!?' ಅಂತ ಪ್ರಶ್ನಿಸುತ್ತಾ ಬೆನ್ನು, ಬಗಲು, ರಟ್ಟೆ, ಚಪ್ಪೆ, ಅಂಗೈ, ಮುಂಗೈ ಎಲ್ಲೆಂದರಲ್ಲಿ ಮನಸೋ ಇಚ್ಛೆ ಬಾರಿಸಿಬಿಟ್ಟರು. ಅಂಥಾ ಪರಿ ಹೊಡೆತ ನಾನು ಯಾವತ್ತು ತಿಂದಿರಲಿಲ್ಲ!

ಯಾವತ್ತು ಸೀರಿಯಸ್ಸಾಗಿ, ಸ್ಟ್ರಿಕ್ಟಾಗಿ ಇರುತ್ತಿದ್ದ ನಮ್ಮ ಆಟದ ಮಾಸ್ತರು ಒಂದು ದಿನ ಮಾತ್ರ ನಮಗೆ ಭಾಳ ಭಿನ್ನವಾಗಿ ಕಾಣಿಸಿದರು. ಆವತ್ತು ನಮ್ಮ ಕ್ಲಾಸಲ್ಲಿ ಯಾವ ಶಿಕ್ಷಕರೂ ಇರಲಿಲ್ಲ. ಕ್ಲಾಸೆಂಬುದು ಸಂತೆಗೆ ಸಮನಾಗಿತ್ತು. ಇದನ್ನು ಕಿಡಕಿಯಿಂದಲೇ ಗಮನಿಸಿದ ಸರ್, ಎಲ್ಲರನ್ನೂ ಹೊರಗೆ ಗ್ರೌಂಡಿಗೆ ಬರುವಂತೆ ಹೇಳಿದರು. ಮುಗೀತಲೇ ನಮ್ಮ ಕಥಿ ಇವತ್ತು, ಎಲ್ಲರಿಗೂ ಸಾಮೂಹಿಕ ಪೂಜೆ ಇನ್ನು... ಅಂದುಕೊಂಡು ಅಳುಕುತ್ತ ನಾವೆಲ್ಲರೂ ಹೊರಗೆ ಬಂದೆವು. ಎಲ್ಲರನ್ನೂ ನಾಲ್ಕಾರು ಲೈನ್ ಮಾಡಿ ಕೂಡಿಸಿದರು. 'ನಾನೀಗ ಒಂದು ಹಾಡು ಹೇಳಿಕೊಡ್ತೀನಿ. ನೀವೆಲ್ಲಾ ಹೇಳಬೇಕು' ಅಂತ ಅವರು ಅಂದಾಗ ನಮಗೆಲ್ಲರಿಗೂ ಭಯಂಕರ ಆಶ್ಚರ್ಯ. ಆದರೂ ಹೂಂ ಸರ್ ಅಂದೆವು. 'ತಾರಾರಿ ತಾರ ಪೋಡು ರಾ...' ಅಂತ ಶುರು ಮಾಡಿದರು. ಇದು ಯಾವ ಭಾಷೆ, ಯಾವ ಹಾಡು ಏನೇನು ತಿಳಿಯದೇ ವಿಚಿತ್ರ ಅನ್ನಿಸಿ, ನಾವೆಲ್ಲ ಮುಖಮುಖ ನೋಡಿಕೊಳ್ಳುತ್ತ ಸರ್ ಹಾಡಿದಂತೆ ನಾವೂ ಹೇಳಿದೆವು. ಮತ್ತೊಮ್ಮೆ 'ತಾರಾರಿ...' ಅಂದರು, ನಾವೂ ಅಂದೆವು. ಮುಂದೆ 'ಹೋಳಿಗೆ ಮ್ಯಾಲೆ ತುಪ್ಪ ಹಾಕು ರಾ...' ಅಂತ ತಾಳಕ್ಕೆ ತಕ್ಕಂತೆ